**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 11/2016
ಪಿಡಬ್ಲು : 4 ಸಿಡಬ್ಲು : 2

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ಚಂದ್ರಕಾಂತ ಬಡಿಗೇರ |
| ತಂದೆಯ ಹೆಸರು | : ಶ್ರೀ.ಕೃಷ್ಣಪ್ಪ |
| ವಯಸ್ಸು | : 42 ವರ್ಷ |
| ಉದ್ಯೋಗ | : ಬಡಿಗೆತನ |
| ವಾಸ್ತವ್ಯ | : ಮೊರಬ, ತಾಲೂಕುಃ ರಾಯಬಾಗ |
| ದಿನಾಂಕ | : 17-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 3 ಮಹಾದೇವ ಅಸೋದೆ ನನಗೆ ಗೊತ್ತಿರುತ್ತಾರೆ. ಚಾಸಾಃ1 ಪ್ರಭಾಕರ ಅಸೋದೆ ನನಗೆ ಗೊತ್ತಿರುತ್ತಾರೆ.

2. ಈಗ 10 ವರ್ಷಗಳ ಹಿಂದೆ ಕುಡಚಿ ಪೋಲಿಸರು ನನಗೆ ಪಂಚನಾಮೆ ಮಾಡಲು ದಿಲೀಪ ಅವರ ಟೈಲರಿಂಗ್ ಅಂಗಡಿಯ ಬಳಿ ಕರೆಸಿದ್ದರು. ಆ ಸಮಯದಲ್ಲಿ ನನ್ನೊಂದಿಗೆ ಚಾಸಾಃ 1 ಪ್ರಭಾಕರ ಮತ್ತು ಚಾಸಾಃ 3 ಮಹಾದೇವ ಅಸುದೆ ಇದ್ದರು. ಜಗಳ ಆದ ಸ್ಥಳವನ್ನು ಪ್ರಭಾಕರ ಅಸುದೆ ಅವರು ಪೋಲಿಸರಿಗೆ ತೋರಿಸಿದರು. ಜಾಗದ ಚೆಕ್ ಬಂದಿಯನ್ನು ಪೋಲಿಸರು ನನಗೆ ಕೇಳಿದರು, ನಾನು ಹೇಳಿದ್ದೇನೆ. ಎರಡೂ ಜಾಗಗಳಲ್ಲಿ ಪೋಲಿಸರು ಪಂಚನಾಮೆ ಮಾಡಿದರು. ಅಂದರೆ ಪ್ರಭಾಕರ ಅವರ ಪಾನಶಾಪ್ ಹತ್ತಿರ ಮತ್ತು ದಿಲೀಪ ಅವರ ಟೈಲರಿಂಗ್ ಅಂಗಡಿಯ ಹತ್ತಿರ ಮಾಡಿದರು. ಈ ಎರಡೂ

ಜಾಗಗಳನ್ನು ಪೋಲಿಸರಿಗೆ ಪ್ರಭಾಕರ ಅವರು ತೋರಿಸಿದರು. ಪಂಚನಾಮೆಗೆ ಪೋಲಿಸರು ನನ್ನ ಸಹಿ ಮಾಡಿಸಿಕೊಂಡಿದ್ದಾರೆ.

3. ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಗುರುತಿಸಿದ್ದಾರೆ. ಪಂಚನಾಮೆಯನ್ನು ನಿಪಿ–7 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–7 [ಎ] ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೋಲಿಸರು ಬೇರೆ ಏನೂ ಮಾಡಿರುವುದಿಲ್ಲ.

4. ಪಂಚನಾಮೆ ಮಾಡಿದ ಸ್ಥಳದಲ್ಲಿ ಪೋಲಿಸರು ಪೋಟೋ ತೆಗೆದಿರುತ್ತಾರೆ ಎಂದು ಹೇಳಿ ಪೋಲಿಸರು ಎರಡೂ ಸ್ಥಳಗಳಲ್ಲಿ ತೆಗೆಯಲಾದ ಪೋಟೋಗಳನ್ನು ನೋಡಿ ಅದರಲ್ಲಿ ತಮ್ಮ ಇರುವಿಕೆಯನ್ನು ಚಾಸಾಃ 1 ಪ್ರಭಾಕರ, ಚಾಸಾಃ 3 ಮಹಾದೇವ ರವರ ಇರುವಿಕೆಯನ್ನು ಗುರುತಿಸಿ ಮೊದಲನೇ ಪೋಟೋವನ್ನು ದಿಲೀಪ ಅವರ ಅಂಗಡಿಯ ಬಳಿ ತೆಗೆಯಲಾಗಿದೆ ಎಂದು ಗುರುತಿಸಿದ್ದಾರೆ. ಪೋಟೋಗಳು ವಿದ್ಯುನ್ಮಾನ ದಾಖಲೆಯಾಗಿದ್ದು ಅದನ್ನು ಗುರುತಿಸುವಿಕೆಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸದೇ ಇರುವುದರಿಂದ ಅವುಗಳನ್ನು ಸಾಕ್ಷಿಯಾಗಿ ಗುರುತಿಸಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮಧ್ಯಾಹ್ನದ ಅವಧಿಗೆ ಪ್ರಕರಣವನ್ನು ಕಾಯ್ದಿರಿಸಲಾಯಿತು.

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಎಲ್ಲಾ ಪ್ರತ್ಯಕ್ಷ ಸಾಕ್ಷಿದಾರರ ಪಾಟೀ ಸವಾಲನ್ನು ಒಟ್ಟಿಗೆ ಒಂದೇ ದಿನ ಮಾಡಲು ಅನುವು ಮಾಡಿಕೊಡಬೇಕು ಎಂದು ಆರೋಪಿ ಪರ ವಕೀಲರು ಮನವಿ ಮಾಡಿರುತ್ತಾರೆ. ಮನವಿಯನ್ನು ಪರಿಗಣಿಸಿ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.